ಸಹಿ ಹಾಕಿ ಕೊಡಿ'' ಎನ್ನುತ್ತ ಹಾಳೆ ಕೈಗಿತ್ತರು. ಹಾಗೆಯೇ ಒಬ್ಬೊಬ್ಬರಾಗಿ ಕಂಪ್ಲೇಂಟು ಬರೆಸಿದರು.

''ಎಲ್ಲಾರೂ ಇಲ್ಲಿ ಕೇಳಿ.. ಹತ್ತಿರದ ಎಲ್ಲ ಪೊಲೀಸ್ ಸ್ಟೇಶನ್ನುಗಳಿಗೂ ಸುದ್ದಿ ಮುಟ್ಟಿಸುತ್ತೇವೆ. ಸುಳಿವು ಏನಾದರೂ ದೊರೆತರೆ ನಾವೇ ನಿಮಗೆ ತಿಳಿಸುತ್ತೇವೆ. ಆಗಾಗ ಇಲ್ಲಿ ಬಂದು ವಿಚಾರಿಸುವ ಅಗತ್ಯ ಇಲ್ಲ'' ಎಂದರು ಒಬ್ಬ ಪೊಲೀಸು, ಯಾರೆಂದು ನೋಡಿದರೆ ಗೋಪಾಲ!

ಮೂರು ದಿನ ಸುದ್ದಿಯಿಲ್ಲದೆ ಕಳೆದಿತ್ತು. ದನದ ವಾರ್ತೆಯಿಲ್ಲದೆ ಗೌರಿಯಮ್ಮನಿಗೆ ಊಟವೂ ಬೇಡವಾಗಿತ್ತು. ದನದ ಕತೆ ಇಷ್ಟೊತ್ತಿಗಾಗಲೇ ಮುಗಿದುಹೋಯಿತೇನೋ ಎಂಬ ಸಂದೇಹ ವ್ಯಕ್ತಪಡಿಸಿದ್ದ ಗೋಪಾಲ ಆಶ್ಚರ್ಯ ಎಂಬಂತೆ ನಾಲ್ಕನೇ ದಿನ ಸಂತಸದ ಸುದ್ದಿ ಕೊಟ್ಟಿದ್ದ. ''ನಿಮ್ಮ ಅದೃಷ್ಟ. ಕೋಟೇಶ್ವರದಲ್ಲಿ ದನಗಳ್ಳರು ಸಿಕ್ಕಿಬಿದ್ದಿದ್ದಾರಂತೆ. ದೊಡ್ಡ ಗ್ಯಾಂಗಂತೆ. ಇಪ್ಪತ್ತಕ್ಕೂ ಹೆಚ್ಚು ದನಕರುಗಳು ಸಿಕ್ಕಿವೆಯಂತೆ, ನಮ್ಮ ಠಾಣೆಯ ವ್ಯಾಪ್ತಿಯ ಆರು ದನ ಅಂದ್ರೆ ನಿಮ್ಮದೂ ಇದೆ'' ಎಂದಿದ್ದ.

''ಈಗ ಅದರಲ್ಲಿ ರಾಜಕೀಯ ಸೇರಿಕೊಂಡಿದೆ. ಟೆಂಪೊ ಡ್ರೈವರ್ ರಾಜಣ್ಣನ ನೇತೃತ್ವದಲ್ಲಿ ಅವರ ಪಕ್ಷದವರು ಜಾನುವಾರುಗಳ ಕ್ಷಿಪ್ರ ಬಿಡುಗಡೆಗಾಗಿ ಕೋಟೇಶ್ವರದ ಪೊಲೀಸ್ ಸ್ಟೇಶನ್ನಿಗೆ ಮುತ್ತಿಗೆ ಹಾಕುತ್ತಾರಂತೆ. ನೀವೂ ಹೋಗ್ತೀರಾ? ಹನ್ನೊಂದು ಗಂಟೆಯ ಒಳಗೆ ಅವರ ಮನೆ ಹತ್ತಿರ ಹೋಗಬೇಕಂತೆ'' ಗಿರಿಯ ಸುದ್ದಿ ತಂದ.

ಮೂರ್ತಿ ಆಲೋಚಿಸಿದರು. ಕೋಟೇಶ್ವರದಿಂದ ಕುಂದಾಪುರಕ್ಕೆ ಮೂರೇ ಮೈಲು. ಕದ್ದೊಯ್ದ ದನಗಳನ್ನು ಬಿಟ್ಟುಕೊಟ್ರೆ ತಾವು ದನವನ್ನು ಕಾಲ್ನಡಿಗೆಯಲ್ಲಾದ್ರೂ ಕುಂದಾಪುರ ತಲ್ಪಿಸಬಹುದೆಂದು ಲೆಕ್ಕ ಹಾಕಿದ ಮೂರ್ತಿ ಹನ್ನೊಂದುಗಂಟೆಗೆ ಉತ್ಸಾಹದಿಂದಲೇ ರಾಜಣ್ಣನ ಮನೆಯ ಬಳಿ ಹೋದರು. ರಾಜಣ್ಣ ಬಂದವರನ್ನೆಲ್ಲ ದನಗಳಂತೆಯೇ ತನ್ನ ಟೆಂಪೊದಲ್ಲಿ ತುಂಬಿಸಿ ಹೊರಟ. ದಾರಿಯುದ್ದಕ್ಕೂ ಜನರಿದ್ದೆಡೆ ರಾಜಣ್ಣ ಮತ್ತವರ ಮಿತ್ರರು ಆಡಳಿತ ಪಕ್ಷದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.

ಕೋಟೇಶ್ವರದ ಪೊಲೀಸ್ ಸ್ಟೇಶನ್ನು ತಲುಪಿದಾಗ ಮಧ್ಯಾಹ್ನ ಎರಡು ಗಂಟೆಯ ಸಮಯ. ಲೀಡರುಗಳು ಹೊರಗೆ ಸ್ವಲ್ಪ ಹೊತ್ತು ಬೊಬ್ಬೆ ಹಾಕಿ ಫೋಟೊ ತೆಗೆಸಿಕೊಂಡು ಹೊರಟು ಹೋದ ಮೇಲೆ ಇನ್‌ಸ್ಪೆಕ್ಟರ್ ಜಾನುವಾರು ಕಳೆದುಕೊಂಡವರನ್ನು ಒಳಗೆ ಕರೆಸಿಕೊಂಡರು. ದನಕಳ್ಳರು ತಪ್ಪಿಸಿಕೊಂಡು ಓಡುವಾಗ ಬಿಟ್ಟು ಹೋಗಿದ್ದ ಟೆಂಪೊವನ್ನೂ ಜಾನುವಾರುಗಳನ್ನೂ ಜಪ್ತಿ ಮಾಡಲಾಗಿದೆ ಎಂಬ ವಾರ್ತೆ ಮೊದಲು ಸಿಕ್ಕಿತು. ಇನ್ನೂ ಸ್ವಲ್ಪ ಹೊತ್ತು ಕಾದ ಮೇಲೆ ಜಾನುವಾರುಗಳನ್ನು ಕೋಟೇಶ್ವರದಲ್ಲಿ ಬಿಡುಗಡೆಗೊಳಿಸಲಾಗುವುದಿಲ್ಲವೆಂದೂ ತಿಳಿಯಿತು. ಸಂಜೆಯಾಗುವ ಹೊತ್ತಿಗೆ ಜಾನುವಾರುಗಳು ಕಂಪ್ಲೇಂಟ್ ಬರೆಸಿದ ಠಾಣೆಗಳಲ್ಲಿ ಯಾರ್‍ಯಾರಿಗೆ ಸೇರಿದವು ಎಂಬ ತನಿಖೆಗೆ ಒಳಪಟ್ಟು ಆಯಾಯಾ ಮಾಲೀಕರಿಗೆ ಬಿಡುಗಡೆಗೊಳ್ಳಲಿವೆ ಎನ್ನುವ ಅಂತಿಮ ತೀರ್ಪು ಸಿಕ್ಕಿತು. ಮೂರ್ತಿರಾಯರು ಖುದ್ದು ಸರ್ಕಲ್ ಇನ್‌ಸ್ಪೆಕ್ಟರ್ ಬಳಿ ತಮ್ಮ ಪೂರ್ತಿ ಸಮಸ್ಯೆಯನ್ನು ವಿವರಿಸಿದರು. ತನ್ನ ದನವನ್ನು ಇಲ್ಲೇ ತನಗೆ ಹಿಂದಿರುಗಿಸಿದಲ್ಲಿ ಸಮಸ್ಯೆಗೆ ಸುಲಭ ಪರಿಹಾರ ದೊರಕುತ್ತದೆ, ಬಹಳ ಉಪಕಾರವಾಗುತ್ತದೆ ಎಂದು ಗೋಗರೆದರು. ''ಸರ್ ನಮಗೆ ಹಾಗೆಲ್ಲ ಮಾಡುವ ಅಧಿಕಾರ ಇಲ್ಲ. ದನಗಳು ಕಂಪ್ಲೇಂಟ್ ಬರೆಸಿದ ಠಾಣೆಗಳಲ್ಲಷ್ಟೇ ಬಿಡುಗಡೆಗೊಳ್ಳುತ್ತವೆ. ನೀವು ಅಲ್ಲೇ ಹೋಗಿ ದಾಖಲೆ ಒದಗಿಸಿ ದನವನ್ನು ಹಿಂದೆ ಪಡೆಯಬೇಕಾಗುತ್ತದೆ" ಎಂದರು. ದನ ಕೈಗೆ ಸಿಕ್ಕಿದ ಕೂಡಲೇ ಅಲ್ಲೇ ಅದರ ಕುಂದಾಪುರದ ಸಾಗಾಟಕ್ಕೆ ಪೊಲೀಸ್ ಪ್ರೊಟೆಕ್ಷನ್ ಕೇಳಿ. ನನ್ನ ಹೆಸರೂ ಹೇಳಿ. ಖರ್ಚು ಕಡಿಮೆ ಹಾಕಿ ಸಹಾಯ ಮಾಡ್ತಾರೆ ಎಂದರಾತ. ಮೂರ್ತಿ ನಿರಾಶರಾಗಿ ಹಿಂದಿರುಗಿದರು.

ಅಳಿಯ ಇಬ್ಬರಿಗೂ ಪಾಸ್‌ಪೋರ್ಟ್, ವೀಸಾ ಮತ್ತು ಟಿಕೆಟ್ ಕಳುಹಿಸಿದ್ದ. ಪ್ರಯಾಣಕ್ಕೆ ಉಳಿದ ಒಂದು ವಾರದಲ್ಲಿ ಪೊಲೀಸರಿಂದ ದನ ಹಿಂದೆ ಪಡೆದು ಪ್ರೊಟೆಕ್ಷನ್ ಸಿಕ್ಕಿದಾಗ ದನವನ್ನು